# ರಾಜ್ಯ ವಿಜ್ಞಾನ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಬೆಂಗಳೂರು:ನವೆಂಬರ್ 08,2005**

ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಗಾಗಿ ಗಣನೀಯ ಸೇವೆ ಸಲ್ಲಿಸಿದವರನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರ ನೀಡುವ ಪ್ರಶಸ್ತಿಗಳಿಗೆ ಯುವ ವಿಜ್ಞಾನಿ ಮತ್ತು ಇಂಜಿನಿಯರುಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ . ಆಯ್ಕೆ ಪ್ರಕ್ರಿಯೆ ಹಾಗೂ ಪ್ರಶಸ್ತಿ ಪ್ರಧಾನ ನಿರ್ವಹಣಾ ಜವಾಬ್ದಾರಿಯನ್ನು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಗೆ ( ಕೆ ಎಸ್ ಸಿ ಎಸ್ ಟಿ) ವಹಿಸಲಾಗಿದೆ . ಈ ಪ್ರಶಸ್ತಿಗಳನ್ನು 2004 ಮತ್ತು 2005 ರ ಸಾಲಿಗೆ ನೀಡಲಾಗುವುದು .

ಪ್ರಶಸ್ತಿ ಹಾಗೂ ಸಂಬಂಧಿತ ವಿವಿರಗಳು ಕೆಳಕಂಡಂತಿವೆ :-

ಸರ್ ಸಿ.ವಿ. ರಾಮನ್ ಪ್ರಶಸ್ತಿಯನ್ನು ಈ ಕೆಳಕಂಡ 5 ವಿಷಯಗಳಲ್ಲಿ ವಿಶೇಷ ಕಾರ್ಯಸಾಧನೆ ಮಾಡಿರುವ ಯುವ ವಿಜ್ಞಾನಿಗಳಿಗೆ ನೀಡಲಾಗುತ್ತದೆ .

1. ಜೀವ ವಿಜ್ಞಾನ. 2.ರಸಾಯನ ವಿಜ್ಞಾನ.3.ಭೌತ ವಿಜ್ಞಾನ ಮತ್ತು ಗಣಿತ.4.ವೈದ್ಯಕೀಯ ವಿಜ್ಞಾನ.5. ಕೃಷಿ ವಿಜ್ಞಾನ ಮತ್ತು ಪಶು ಸಂಗೋಪನೆ .

ಪ್ರೊಫೆಸರ್ ಸತೀಶ್ ಧಾವನ್ ಪ್ರಶಸ್ತಿಯನ್ನು ಈ ಕೆಳಕಂಡ ನಾಲ್ಕು ವಿಷಯಗಳಲ್ಲಿ ವಿಶೇಷ ಕಾರ್ಯಸಾಧನೆ ಮಾಡಿರುವ ಯುವ ಇಂಜಿನಿಯರುಗಳಿಗೆ ನೀಡಲಾಗುತ್ತದೆ .

1. ಅಂತರಿಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ .2. ಇಂಜಿನಿಯರಿಂಗ್ ವಿಜ್ಞಾನ.3. ಭೂ ವಿಜ್ಞಾನ. 4. ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ .

ಡಾ. ಕಲ್ಪನಾ ಚಾವ್ಲ ಪ್ರಶಸ್ತಿಯನ್ನು ವಿಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರದ ಯಾವುದೇ ವಿಷಯದಲ್ಲಿ ವಿಶೇಷ ಕಾರ್ಯಸಾಧನೆ ಮಾಡಿರುವ ಒಬ್ಬ ಮಹಿಳಾ ಯುವ ವಿಜ್ಞಾನಿಗೆ ನೀಡಲಾಗುತ್ತದೆ .

ಡಾ. ರಾಜಾ ರಾಮಣ್ಣ ಪ್ರಶಸ್ತಿಯನ್ನು ವಿಜ್ಞಾನದ ಇತಿಹಾಸ ಮತ್ತು ತತ್ವಜ್ಞಾನ/ ವಿಜ್ಞಾನ ಮತ್ತು ಸಮಾಜ/ ವಿಜ್ಞಾನ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಕಾರ್ಯಸಾಧನೆ ಮಾಡಿರುವ ಒಬ್ಬ ವಿಜ್ಞಾನಿಗೆ /ಇಂಜಿನಿಯರ್‌ಗೆ ನೀಡಲಾಗುತ್ತದೆ .

ಪ್ರತಿಯೊಂದು ಪ್ರಶಸ್ತಿಯು ರೂ.25,000/- ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರಗಳನ್ನು ಒಳಗೊಂಡಿರುತ್ತದೆ . ಅಭ್ಯರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಹುಟ್ಟಿದವರಾಗಿರಬೇಕು ಅಥವಾ ಕನಿಷ್ಠ ಇಪ್ಪತ್ತು ವರ್ಷಗಳ ಕಾಲ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರಬೇಕು . ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಖ್ಯಾತಿಯ ಸಂಶೋಧನಾ ಪತ್ರಿಕೆಗಳಲ್ಲಿ ಕನಿಷ್ಠ ಐದು ಸಂಶೋಧನಾ ಲೇಖನ/ ಪ್ರಬಂಧಗಳನ್ನು ಪ್ರಟಕಟಿಸಿರಬೇಕು . ಇದೇ ಪ್ರಶಸ್ತಿಯನ್ನು ಹಿಂದಿನ ವರ್ಷಗಳಲ್ಲಿ ಪಡೆದಿರಬಾರದು.

ಅಭ್ಯರ್ಥಿಗಳು ತಮ್ಮ ಸ್ವವಿವರ , ಕಾರ್ಯ ಸಾಧನೆಯ ವಿವರಗಳೊಂದಿಗೆ , ತಮ್ಮ ಇತ್ತೀಚಿನ ಎರಡು ಭಾವಚಿತ್ರ ಮತ್ತು ಆಯಾ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿರುವ ಇಬ್ಬರು ಗಣ್ಯವ್ಯಕ್ತಿಗಳಿಂದ ಪತ್ರ , ಈ ಎಲ್ಲಾ ವಿವರಗಳನ್ನು ಒಳಗೊಂಡಿರುವ ನಾಮಪತ್ರಗಳನ್ನು ದ್ವಿಪ್ರತಿಯಲ್ಲಿ ಲಕೋಟೆಯಲ್ಲಿಟ್ಟು " ................ಪ್ರಶಸ್ತಿಗೆ ಅರ್ಜಿ " ಎಂದು ನಮೂದಿಸಿ ದಿನಾಂಕ 12ನೇ ಡಿಸೆಂಬರ್ 2005 ರೊಳಗಾಗಿ ತಲುಪುವಂತೆ ಕಳುಹಿಸಬೇಕು .

ಹೆಚ್ಚಿನ ಮಾಹಿತಿ ಮತ್ತು ವಿವರಗಳಿಗೆ ಸಂಪರ್ಕಿಸಿ : ಕಾರ್ಯದರ್ಶಿ,ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ,ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು–560012 ದೂರವಾಣಿ :23341652,23348840,23348848/49 , ಫ್ಯಾಕ್ಸ್.23348840 website: www.kscst.org.in, Email: kscst@vsnl.net

*******

ಪಚ : ಸು: ಆ:ಕ : ಬೆಂ : 16 :30 08–11–2005